ದಿನಾಂಕ 26.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮಧ್ಯಂತರ ಅರ್ಜಿಯ ಆದೇಶದ ಮೇರೆಗೆ,

<u>ಪಾಟೀ ಸವಾಲು</u> ಃ ಆರೋಪಿ ಪರಃ ಶ್ರೀ ಎ ಎಸ್ ಎಂ ವಕೀಲರಿಂದಃ

ದಿಃ03.02.2021 ರಂದು 8.00 ಗಂಟೆಗೆ ಬಂದಂತಹ ಮಾಹಿತಿ ಬಾತ್ಮೀದಾರರಾಗಿರುತ್ತದೆ. ಸದ್ರಿ ಮಾಹಿತಿ ಬಂದ ಬಗ್ಗೆ ಠಾಣಾ ಎಸ್ ಹೆಚ್ ಒ ಠಾಣಾ ಡೈರಿಯಲ್ಲಿ ನಮೂದಿಸಿರುತ್ತಾರೆ. ನಾನು ಠಾಣೆಯಿಂದ 8.30 ಗಂಟೆಗೆ ಇಲಾಖಾ ವಾಹನದಲ್ಲಿ ಹೊರಟು ಪಂಚನಾಮೆಗೆ ಬೇಕಾದಂತಹ ಸಾಮಾಗ್ರಿಗಳನ್ನು ತೆಗೆದುಕೊಂಡು ಹೋಗಿರುತ್ತೇವೆ. ಈ ಬಗ್ಗೆ ನಾನು ಮಹಜರಿನಲ್ಲಿ ನಮೂದು ಮಾಡಿರುವುದಿಲ್ಲ. ಚಾಸಾ- 2 ಮತ್ತು 3 ರವರನ್ನು ಅಂದಾಜು ಬೆಳಿಗ್ಗೆ 8.50 ರಿಂದ 8.55 ಗಂಟೆಗೆ ಕರೆಸಿರುತ್ತೇವೆ. ಅವರಿಗೆ ಬಂದ ತಕ್ಷಣ ನೋಟಿಸು ನೀಡಿರುತ್ತೇವೆ. ಸಾಕ್ಷಿ ಮುಂದುವರಿದು 10.30 ಗಂಟೆಗೆ ನೋಟಿಸು ನೀಡಿರುತ್ತೇನೆ. ಚಸಾ-2 ಮತ್ತು 3

ರವರಿಗೆ ಠಾಣೆಗೆ ಬಂದ ಕೂಡಲೇ ನೋಟಿಸು ನೀಡಲು ತೊಂದರೆ ಇರಲಿಲ್ಲ. ಚಾಸಾ-2 ಮತ್ತು 3 ರವರ ಸಹಿಯನ್ನು ಠಾಣೆಯಲ್ಲಿ ಪಡೆದುಕೊಂಡು ಯಾವುದೇ ಸ್ಥಳ ಮಹಜರು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನಾ ಸ್ಥಳ ನಮ್ಮ ಠಾಣೆಯಿಂದ 8 ಕಿ ಮೀ ದೂರದಲ್ಲಿ ಇದೆ.

ಬಾತ್ಮೀದಾರರನ್ನು ನಾನು ವೈಯುಕ್ತಿಕವಾಗಿ ನೋಡಿರುತ್ತೇನೆ. ಅವರೇ ಆರೋಪಿಯ ಮನೆಯನ್ನು 20 ಮೀಟರ್ ದೂರದಿಂದ ತೋರಿಸಿಕೊಟ್ಟಿರುತ್ತಾರೆ. ಆರೋಪಿಗಳು ನಮ್ಮನ್ನು ನೋಡಿ ಓಡಿ ಹೋಗಿರುತ್ತಾರೆ ಎಂದು ಅವರ ಹೆಂಡತಿ ಹೇಳಿದ್ದರಿಂದ ಗೊತ್ತಾಗಿರುತ್ತದೆ . ನನಗೆ ಖುದ್ದಾಗಿ ಗೊತ್ತಿರುವುದಿಲ್ಲ. ಅರೋಪಿಗಳು ಆ ದಿನ ಅವರ ಮನೆಯಲ್ಲಿಯೇ ಇದ್ದರು ಅವರ ಹೆಂಡತಿ ಆ ರೀತಿ ಹೇಳಿಕೆ ನೀಡಿಲ್ಲ ಎಂದರೆ ಸರಿಯಲ್ಲ. ದೂರ ದಾಖಲಿಸುವ ಮುನ್ನ ಮಹಜರನ್ನು ತಯಾರಿಸಲು ತೊಂದರೆ ಇರಲಿಲ್ಲ. ದೂರು ದಾಖಲಿಸಿದ ನಂತರ ಠಾಣಾ ಸಿಬ್ಬಂದಿ ಪ್ರಕರಣದ ಕಡತವನ್ನು ತಂದು ಕೊಟ್ಟಿರುತ್ತಾರೆ. ಮಹಜರನ್ನು ಸಂಜೆ 3.00 ರಿಂದ 4.00 ಗಂಟೆಯವರೆಗೆ ಮಾಡಿರುತ್ತೇನೆ. ಪಶುವೈದ್ಯಾಧಿಕಾರಿಯವರು ಸ್ಥಳಕ್ಕೆ ಬರುವಾಗ 3.00 ಗಂಟೆಯಾಗಿತ್ತು. ಅವರು ಬರಲು ತಡವಾದ ಕಾರಣ ಪಶುವಿನ ಮಾಂಸದ ತುಂಡುಗಳನ್ನು ಸ್ಯಾಂಪಲ್ ಕಳುಹಿಸಲು ಬೇಕಾದ ಕಾರಣ ಮಹಜರು ಮಾಡಲು ತಡವಾಯಿತು. ಅದರ ಬಗ್ಗೆ ನಾನು ಮಹಜರಿನಲ್ಲಿ ನಮೂದು ಮಾಡಿರುವುದಿಲ್ಲ, ಸಿಡಿಯಲ್ಲಿ ನಮೂದಿಸಿರುತ್ತೇನೆ.

ಆರೋಪಿಯ ಮನೆಯಲ್ಲಿ ಯಾವುದೇ ದನದ ಮಾಂಸ ಸಿಕ್ಕಿರುವುದಿಲ್ಲ ಮತ್ತು ಆ ರೀತಿ ಘಟನೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಆರೊಪಿಗಳು ದನಗಳನ್ನು ಕಳ್ಳತನ ಮಾಡಿ ಮಾಂಸಕ್ಕೆ ಮಾರಾಟ ಮಾಡುತ್ತಿರುವ ಬಗ್ಗೆ ನಮ್ಮ ಠಾಣೆಯಲ್ಲಿ ಯಾವುದೇ ಪ್ರಕರಣ ದಾಖಲಾಗಿರುವುದಿಲ್ಲ. ಬೆಳಿಗ್ಗೆ 10.30 ರಿಂದ 3.00 ಗಂಟೆಯವರೆಗೆ ನಾವು ಅದೇ ಸ್ಥಳದಲ್ಲಿ ಇದ್ದೇವು. ಪಶು ವೈದ್ಯಾಧಿಕಾರಿಗಳು ಮಾಂಸವನ್ನು ಸ್ಥಳದಲ್ಲಿ ಪರೀಕ್ಷೆ ಮಾಡಿ ವರದಿ ನೀಡಿರುತ್ತಾರೆ. ಆ ವರದಿಯಲ್ಲಿ ಅವರು ಯಾವ ರೀತಿ ಮಾಂಸವನ್ನು ಪರೀಕ್ಷೆ ಮಾಡಿರುತ್ತಾರೆ ಎಂದು ನಮೂದಿಸಿರುವುದಿಲ್ಲ. ದಿಃ15.02.2021 ರಂದು ಪಶು ವೈದ್ಯಾಧಿಕಾರಿ ವರದಿ ನೀಡಿರುತ್ತಾರೆ ಸ್ಥಳದಲ್ಲಿ ನೀಡಿರುವುದಿಲ್ಲ ಎಂದರೆ ಸರಿ. ಪಶು ವೈದ್ಯಾಧಿಕಾರಿಯವರು

ಯಾವ ಆಧಾರದಲ್ಲಿ ಸ್ಥಳದಲ್ಲಿ ಅದು ಯಾವ ಮಾಂಸ ಎಂದು ಬಾಯಿ ಮಾತಿನಲ್ಲಿ ಹೇಳಿರುತ್ತಾರೆ ಲಿಖಿತವಾಗಿ ಹೇಳಿರುವುದಿಲ್ಲ. ದನದ ಮಾಂಸವನ್ನು ನಾವೇ ಆರೋಪಿಯ ಮನೆಯಲ್ಲಿ ಇಟ್ಟು ಈ ಪ್ರಕರಣ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದನ ಕಳ್ಳತನ ಮಾಡಿದ ಬಗ್ಗೆ ನಮ್ಮ ಠಾಣೆಯ ಅಕ್ಕಪಕ್ಕದ ಠಾಣೆಗಳಲ್ಲಿ ಪರಿಶೀಲನೆ ಮಾಡಿರುವುದಿಲ್ಲ. ಇಂತಹ ಘಟನೆ ಆಗದೆ ಇದ್ದ ಕಾರಣ ದೂರು ದಾಖಲಿಸುವ ಸಮಯ ಮತ್ತು ಮಹಜರು ಮಾಡುವ ಸಮಯದಲ್ಲಿ ವ್ಯತ್ಯಾಸ ಕಂಡು ಬರುತ್ತದೆ ಎಂದರೆ ಸರಿಯಲ್ಲ. ಪ್ರತಿ ಪ್ಯಾಕೆಟ್ ನಲ್ಲಿ ಎರಡೆರಡು ತುಂಡು ಮಾಂಸಗಳನ್ನು ಎಫ್ ಎಸ್ ಎಲ್ ಗೆ ಸ್ಯಾಂಪಲ್ ಆಗಿ ಕಳುಹಿಸಿರುತ್ತೇವೆ. ಸ್ಯಾಂಪಲ್ ತೆಗೆದುಕೊಳ್ಳುವ ಸಮಯದಲ್ಲಿ ಪ್ರತ್ಯೇಕವಾಗಿ ಮಹಜರು ಮಾಡಿರುವುದಿಲ್ಲ.

ತಕ್ಷೀರು ಸ್ಥಳದಲ್ಲಿ ವಶಕ್ಕೆ ಪಡೆದುಕೊಂಡಂತಹ ಎಲ್ಲಾ ವಸ್ತುಗಳನ್ನು ಠಾಣೆಗೆ ತೆಗೆದುಕೊಂಡು ಬಂದಿರುತ್ತೇವೆ. ಆ ಸಮಯದಲ್ಲಿ ಠಾಣಾ ತನಿಖಾ ಪಿ ಎಸ್ ಐ ಇದ್ದ ಬಗ್ಗೆ ನೆನಪಿಲ್ಲ. ಮಾಂಸವನ್ನು ಚಾಸಾ-4 ರವರಿಗೆ ವಿಲೇವಾರಿ ಮಾಡಲು ಲಿಖಿತವಾಗಿ ಆದೇಶಿಸಿ ಹಸ್ತಾಂತರಿಸಿರುತ್ತೇನೆ. ಅವರಿಗೆ ಸ್ಥಳದಲ್ಲಿ ಹಸ್ತಾಂತರಿಸಿದ್ದೇನೆ. ಬಾತ್ಮೀದಾರರಿಗೆ ಮತ್ತು ಆರೋಪಿಗಳಿಗೆ ವೈಮನಸ್ಸು ಇದ್ದ ಕಾರಣ ಆರೋಪಿಗಳ ವಿರುದ್ಧ ಸುಳ್ಳು ಪ್ರಕರಣವನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ಬಾತ್ಮೀದಾರರು ಆರೋಪಿಯ ಮನೆಗೆ ಕರೆದುಕೊಂಡು ಹೋಗಲು ತೊಂದರೆ ಇರಲಿಲ್ಲ. ಆರೋಪಿಗಳಿಗೂ ನ್ಯಾಯಾಲಯದಮುಂದೆ ಇರುವ ಮುದ್ದೆ ಮಾಲುಗಳಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ತನಿಖಾ ಸಮಯದಲ್ಲಿ ಆರೋಪಿಗಳು ಇದ್ದರೂ ಸಹ ಬಾತ್ಮೀದಾರರೊಂದಿಗೆ ಸೇರಿ ಸುಳ್ಳು ಪ್ರಕರಣ ದಾಖಲಿಸಿ ನ್ಯಾಯಾಲಯಕ್ಕೆ ಸೃಷ್ಟಿಸಿದ ದಾಖಲೆಗಳನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ : ಇಲ್ಲ

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

1 ನೇ ಹೆ.ಸಿ.ನ್ಯಾ ಮತ್ತು ಪ್ರ ದ ನ್ಯಾ ದಂ
ಕಾರ್ಕಳ